**ದಿನಾಂಕಃ 06.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ. ಎಸ್.ಸಿ. ಪ್ರತಿವಾದಿ ಪರ ವಕೀಲರಿಂದ.**

2013 ರಿಂದ ಪ್ರತಿವಾದಿಯ ಪರಿಚಯ ಇರುತ್ತದೆ. ನಾನು ಮತ್ತು ಅವರು ಒಟ್ಟಿಗೆ ಕೆಲಸ ಮಾಡುತ್ತಿದ್ದೆವು ಎಂದರೆ ಸರಿ. ನಮ್ಮಿಬ್ಬರ ಮನಸ್ಥಾಪ ಉಂಟಾಗಿ ಈಗ ಒಟ್ಟಿಗೆ ಕೆಲಸ ಮಾಡುತ್ತಿಲ್ಲ ಎಂದರೆ ಸರಿ. ಪ್ರತಿವಾದಿಯ ಮೇಲೆ ಸೆಂಟ್ರಲ್ ಸಿಇಎನ್ ಪೊಲೀಸ್ ಠಾಣೆಯಲ್ಲಿ ಗುನ್ನಾ ಸಂಖ್ಯೆಃ 828/2022 ರಂತೆ ಹಾಗೂ ಮಹಾಲಕ್ಷ್ಮಿಪುರಂ ಪೊಲೀಸ್ ಠಾಣೆಯಲ್ಲಿ ಗುನ್ನಾ ಸಂಖ್ಯೆಃ 307/2023 ರಂತೆ ಪ್ರಕರಣಗಳನ್ನು ದಾಖಲಿಸಿದ್ದೇನೆ ಎಂದರೆ ಸರಿ.  ಸಿಇಎನ್ ಪೊಲೀಸರು ಸದರಿ ಪ್ರಕರಣದಲ್ಲಿ ಬಿ ವರದಿ ಸಲ್ಲಿಸಿದ್ದಾರೆ ಎಂದರೆ ಸರಿ. ಪ್ರತಿವಾದಿಯ ಮೇಲೆ ಇನ್ನೊಂದು ಸಿವಿಲ್ ಮೊಕದ್ದಮೆಯನ್ನು ನನ್ನ ಕಂಪನಿಯ ಪರವಾಗಿ ಹಾಕಿದ್ದೇನೆ ಎಂದರೆ ಸರಿ.

ರಿಟ್ಸ್ ಕಾರ್ಟನ್ ಹೋಟೆಲ್ ನಲ್ಲಿ ರೂಂಗಳು, ರೆಸ್ಟೊರೆಂಟ್, ಪಬ್, ಸ್ಪಾ ಮತ್ತು ಪಾರ್ಕಿಂಗ್ ಜಾಗ ಇದೆ ಎಂದರೆ ಸರಿ. ಸದರಿ ಹೋಟೆಲ್ ನಲ್ಲಿ ಹಲವಾರು ಕಂಪನಿಗಳು ಕೆಲಸ ಮಾಡುತ್ತವೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಕಂಪನಿ ಮುಂಚೆ ಅಲ್ಲಿ ಇತ್ತು.

ದಿನಾಂಕಃ 08.07.2022 ರ ರಾತ್ರಿ ನನ್ನ ಕಾರಿಗೆ ಹಾನಿಯಾದ ವಿಷಯ ಗೊತ್ತಾಯಿತು. ಸದರಿ ವೇಳೆ ನನ್ನ ಕಾರಿಗೆ ಯಾರು ಹಾನಿ ಮಾಡಿದ್ದರು ಎಂದು ಗೊತ್ತಾಗದೇ ಇದ್ದ ಕಾರಣ ತಕ್ಷಣ ದೂರನ್ನು ನೀಡಿರಲಿಲ್ಲ. ಸುಮಾರು 1 ತಿಂಗಳ ನಂತರ ದೂರು ನೀಡಿದ್ದೇನೆ. ನಂತರ ಹೋಟೆಲ್ ಸಿಬ್ಬಂದಿಗಳನ್ನು ವಿಚಾರಿಸಿ ಮತ್ತು ಸಿಸಿಟಿವಿ ಪರಿಶೀಲಿಸಿ ತಡವಾಗಿ ದೂರು ನೀಡಿದ್ದೇನೆ. ಸಿಸಿಟಿವಿ ಫೂಟೇಜ್ ನಿಂದ ಪ್ರತಿವಾದಿ ಈ ಕೃತ್ಯ ಮಾಡಿರುವುದು ಗೊತ್ತಾಗಿರುತ್ತದೆ. ನಂತರ ಪ್ರತಿವಾದಿ ತನ್ನ ತಪ್ಪನ್ನು ಒಪ್ಪಿಕೊಂಡು ಈ ಕೃತ್ಯ ತಾನೇ ಮಾಡಿರುವುದಾಗಿ ತಪ್ಪೊಪ್ಪಿಗೆ ಬರೆದುಕೊಟ್ಟಿರುತ್ತಾರೆ. ಪ್ರತಿವಾದಿ ಯಾವುದೇ ತಪ್ಪೊಪ್ಪಿಗೆ ಪತ್ರ ಬರೆದುಕೊಟ್ಟಿರುತ್ತಾರೆ ಹಾಗೂ ತಪ್ಪೊಪ್ಪಿಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ತಪ್ಪೊಪ್ಪಿಗೆ ಪತ್ರವನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿ. ಬೇರೆ ಪ್ರಕರಣದಲ್ಲಿ ಹಾಜರುಪಡಿಸಿದ್ದು, ಅವಶ್ಯಕತೆ ಇದ್ದರೆ ಈ ಪ್ರಕರಣದಲ್ಲಿಯೂ ಸಹ ಹಾಜರುಪಡಿಸುತ್ತೇನೆ.

ದೂರು ನೀಡಿದ ನಂತರ ಪೊಲೀಸರು ಸಿಸಿಟಿವಿ ಫೂಟೇಜ್ ತೋರಿಸಿದರು, ದಿನಾಂಕ

ನೆನಪಿಲ್ಲ. 2022 ನೇ ಸಾಲಿನಲ್ಲಿಯೇ ಸಿಸಿಟಿವಿ ಫೂಟೇಜ್ ತೋರಿಸಿರುತ್ತಾರೆ. ರಿಟ್ಸ್ ಕಾರ್ಟನ್ ಹೋಟೆಲ್ ಗೆ ದಿನಕ್ಕೆ ಸಾವಿರಾರು ಜನ ಬಂದು ಹೋಗುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಹೋಟೆಲ್ ನಲ್ಲಿ ಸಾಕಷ್ಟು ರೂಂ ಗಳು ಇವೆ ಎಂದರೆ ಸರಿ. ಈ ಘಟನೆ ಆಯಿತು ಎಂದು ಹೇಳುವ ಅವಧಿಯಲ್ಲಿ ಪ್ರತಿವಾದಿ ಮತ್ತು ನಾನು ಒಟ್ಟಿಗೆ ಕೆಲಸ ಮಾಡುತ್ತಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

ಸದರಿ ಕಾರನ್ನು ರಿಪೇರಿ ಮಾಡಿಸಿದ ಬಿಲ್ಲುಗಳ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ಸದರಿ ಕಾರ್ ನನ್ನ ತಂದೆ ಹೆಸರಿನಲ್ಲಿ ಇದೆ. ಕಾರ್ ನ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಕಾರುಗಳಿಗೆ ಹಾನಿಯಾದಾಗ ವಿಮೆ ಪರಿಹಾರ ಸಿಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಯಾವುದೇ ವಿಮೆ ಪರಿಹಾರವನ್ನು ಪಡೆದಿಲ್ಲ. ನಿಪಿ-7 ರಿಂದ 14 ಪೋಟೋಗಳನ್ನು ನನ್ನ ಮೊಬೈಲ್ ನಲ್ಲಿ ತೆಗೆದುಕೊಂಡ ಪೋಟೋಗಳಾಗಿರುತ್ತವೆ. ನಿಪಿ-4 ಪೆನ್ ಡ್ರೈವ್ ನಲ್ಲಿ ಇರುವ ಫೂಟೇಜ್ ನಲ್ಲಿ ಪ್ರತಿವಾದಿ ನನ್ನ ಕಾರಿಗೆ ಹಾನಿ ಮಾಡುವ ದೃಶ್ಯಾವಳಿಗಳು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ತನ್ನ ಕೈಯಲ್ಲಿ ಕೀ ಹಿಡಿದುಕೊಂಡು ಕಾರ್ ಮೇಲೆ ಸ್ಕ್ರಾಚ್ ಮಾಡಿರುತ್ತಾರೆ.

ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ನಿಪಿ-4 ಪೆನ್ ಡ್ರೈವ್ ಅನ್ನು ತೆರೆದ ನ್ಯಾಯಾಲಯದ ಕಂಪ್ಯೂಟರ್ ನಲ್ಲಿ ಪ್ಲೇ ಮಾಡಲಾಯಿತು. Nikhil Second Incident ಎನ್ನುವ ಫೋಲ್ಡರ್ ನಲ್ಲಿನ 2 ನೇ ವಿಡೀಯೋವನ್ನು ಹಾಗೂ ಮೊದಲ ಮುಖಪುಟದಲ್ಲಿರುವ 9.mp4 ವಿಡೀಯೋಗಳನ್ನು ನೋಡಲಾಯಿತು. ಸಾಕ್ಷಿ ಸದರಿ ವಿಡಿಯೋದಲ್ಲಿ ಬರುವ ಕಪ್ಪು ಬಟ್ಟೆ ಧರಿಸಿರುವ ವ್ಯಕ್ತಿ ಪ್ರತಿವಾದಿಯಾಗಿದ್ದು ಆತ ತನ್ನ ಕೈಯಲ್ಲಿರುವ ಕೀನಿಂದ ನನ್ನ ಕಾರನ್ನು ಎರಡು ಬಾರಿ ಸ್ಕ್ರಾಚ್ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. (ಸದರಿ ಪೆನ್ ಡ್ರೈವ್ ಅನ್ನು ಕಡತದಲ್ಲಿ ಮರಳಿ ಇಡಲಾಯಿತು.)

ಸದರಿ ಎರಡು ವಿಡೀಯೋಗಳಲ್ಲಿ ಪ್ರತಿವಾದಿ ಕಾರಿಗೆ ಸ್ಕ್ರಾಚ್ ಮಾಡುವ ದೃಶ್ಯ ಇಲ್ಲ ಎಂದರೆ ಸರಿಯಲ್ಲ. ಸದರಿ ಎರಡು ವಿಡೀಯೋಗಳಲ್ಲಿ ನನ್ನ ಕಾರಿನ ನಂಬರ್ ಕಾಣುತ್ತಿಲ್ಲ ಎಂದರೆ ಸರಿಯಲ್ಲ. ಸದರಿ ವಿಡೀಯೋಗಳಲ್ಲಿ ಕಾಣುತ್ತಿರುವ ಹೊಟೇಲ್ ಸಿಬ್ಬಂದಿ ಮತ್ತು

ಭದ್ರತಾ ಸಿಬ್ಬಂದಿಯನ್ನು ನಾನು ವಿಚಾರಣೆ ಮಾಡಿಲ್ಲ. ನನಗೆ ಅವರನ್ನು ವಿಚಾರಣೆ ಮಾಡುವ ಅವಶ್ಯಕತೆ ಇದೆ ಎಂದು ಅನಿಸದೆ ಇರುವ ಕಾರಣ ನಾನು ಅವರನ್ನು ವಿಚಾರಣೆ ಮಾಡಿಲ್ಲ. ನಾನು ಅವರನ್ನು ವಿಚಾರಣೆ ಮಾಡದೇ ಇರುವ ಕಾರಣ ನಿಜ ಸ್ಥಿತಿ ನನಗೆ ಗೊತ್ತಾಗಿಲ್ಲ ಎಂದರೆ ಸರಿಯಲ್ಲ. ನಾನು ಯಾರನ್ನು ವಿಚಾರಣೆ ಮಾಡದೆ, ಪ್ರತಿವಾದಿ ಮೇಲಿನ ವೈಷಮ್ಯದಿಂದ ಪ್ರತಿವಾದಿ ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಆತನ ಮೇಲೆ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-6 ರಲ್ಲಿ ನನ್ನ ಮೊಬೈಲ್ ಬಗ್ಗೆ ಯಾವುದೇ ಮಾಹಿತಿ ನಮೂದಿಸಿಲ್ಲ ಎಂದರೆ ನನಗೆ ನೆನಪಿಲ್ಲ. ನನ್ನದು ಎನ್ನಲಾದ ಕಾರಿಗೆ ಪ್ರತಿವಾದಿ ಯಾವುದೇ ಹಾನಿ ಮಾಡದೇ ಇದ್ದರೂ ಸಹ ಆತನ ಮೇಲೆ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕಾರನ್ನು ರಿಪೇರಿ ಮಾಡಿಸದೇ ಇದ್ದರೂ ಸಹ ಸುಳ್ಳು ಪರಿಹಾರ ಕೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು).**

**ಓ ಹೇ ಕೇ ಸ ಇದೆ.**

**15 ನೇ ಅಪರ ನ್ಯಾಯಾಧೀಶರು**
**ಮತ್ತು ಎಂಎಸಿಟಿ, ಬೆಂಗಳೂರು**